ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಪೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
SJ
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
ಶೇಟ್
ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 26 ॥ ಸಂಚಿಕೆ : 22 Udp/1263/2015-17 || R.NO.50495/91 ॥ ತಾರೀಕು : 14–06–2016 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 350/

ಕುಂದಾಪುರದಲ್ಲಿ 5 ದಶಕಗಳಿಂದ ನಿರಂತರ ಸೇವೆಯಲ್ಲಿರುವ

**ವಸಂತ ಬೇಕರಿ**

ಗ್ರಾಹಕರ ಅನುಕೂಲತೆಗಾಗಿ ಅತ್ಯಂತ ಸುಸಜ್ಜಿತವಾಗಿ ಇನ್ನೊಂದು ನೂತನ ಮಾರಾಟ ಕೇಂದ್ರವನ್ನು ಪ್ರಾರಂಭಿಸಲಾಗಿದೆ.

ಕಾರ್ಪೋರೇಶನ್ ಬ್ಯಾಂಕ್ ಬಳಿ, ಮುಖ್ಯ ರಸ್ತೆ, ಕುಂದಾಪುರ

ಸರ್ವರಿಗೂ ಹಾರ್ದಿಕ ಸ್ವಾಗತ ಬಯಸುವ,



**ಕೆ.ಪಿ.ಶ್ರೀಶನ್**
ಮಾಲಕರು , ವಸಂತ ಬೇಕರಿ, ಕುಂದಾಪುರ
ಫೋನ್ : 08254–230503, ಮೊ: 9448171188

# ಆಮೆವೇಗದ ಮೇಲ್ ಸೇತುವೆ ಕಾಮಗಾರಿ

# ಕುಂದಾಪುರದಲ್ಲಿ ಚತುಷ್ಪಥ: ಸರ್ವರಿಗೂ ಸಂಕಷ್ಟ





(ಫೋಟೋ :ಶ್ರೀನಿವಾಸ ಶೇಟ್, ಸುಮಾ ಸ್ಟುಡಿಯೋ)

ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಕೋಡಿ ರಸ್ತೆಯಿಂದ ಬಸ್ರೂರು ವೃತ್ತ, ಅಲ್ಲಿಂದ ಶಾಸ್ತ್ರಿ ವೃತ್ತ ಅನಂತರ ಸಂಗಮ್ ವೃತ್ತದ ತನಕ ಚತಷ್ಪಥ ಹೆದ್ದಾರಿ ಯಾವ ರೀತಿ ಇರುತ್ತದೆ ಎಂಬ ಬಗ್ಗೆ ಸರಿಯಾದ ಮಾಹಿತಿಯೇ ಪ್ರಕಟವಾಗಿಲ್ಲ. ಈ ಪ್ರದೇಶ ಜನ ನಿಬಿಢ ಪ್ರದೇಶವಾಗಿದ್ದು ವಾಹನ ಸಂಚಾರ ವ್ಯವಸ್ಥೆ ಯಾವ ರೀತಿಯಲ್ಲಿರುತ್ತದೆ ಎನ್ನುವುದೇ ನಿಗೂಢವಾಗಿದೆ.

ಈ ಬಾರಿ ಮದುವೆ ಸೀಸನ್‌ನಲ್ಲಿ ವಾಹನ ಸಂಚಾರ ವ್ಯವಸ್ಥೆಯಲ್ಲಾದ ಗೊಂದಲ, ರಸ್ತೆ ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಇನ್ನಷ್ಟು ಬಿಗಡಾಯಿಸಬಹುದು. ಈ ಮಳೆಗಾಲದಲ್ಲಿ ಜನರಿಗಾಗುತ್ತಿರುವ ಸಂಕಟವನ್ನು ಅರಿತು ತುರ್ತಾಗಿ ಮಾಡಬೇಕಾದ ಕಾಮಗಾರಿಗಳು ಬಹಳಷ್ಟಿವೆ. ಸಂಬಂಧ ಪಟ್ಟವರು ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಕೆಲವೆಡೆ ಚತುಷ್ಪಥ ಹೆದ್ದಾರಿಗೆ ಅಲಂಕಾರ, ಬೀದಿ ದೀಪಗಳ ಅಳವಡಿಕೆ, ಕೆಲವೆಡೆ ಅರೆಬರೆ ಕಾಮಗಾರಿಯಿಂದ ವಾಹನ ಚಾಲಕರ ಚಡಪಡಿಕೆ, ಕುಂದಾಪುರ ವ್ಯಾಪ್ತಿಯಲ್ಲಂತೂ ಚತುಷ್ಪಥ ರಸ್ತೆ ಕಾಮಗಾರಿಯ ಕೆಲಸ ಉಳಿದ ಕಡೆ ಹೋಲಿಸಿದರೆ ಏನೂ ಇಲ್ಲ. ಶಾಸ್ತ್ರಿ ವೃತ್ತದ ಬಳಿ ನಿರ್ಮಾಣ ಹಂತದಲ್ಲಿರುವ ಓವರ್ ಬ್ರಿಡ್ಜ್ ಕಾಮಗಾರಿಯಿಂದ ಅಪಾರ ಸಂಕಷ್ಟ. ಕೇಳುವರರು ಯಾರೂ ಇಲ್ಲ ಎಂಬ ಪರಿಸ್ಥಿತಿ ಈಗ ಉದ್ಭವಿಸಿದೆ.

ಕೋಟೇಶ್ವರದಿಂದ ಕುಂದಾಪುರಕ್ಕೆ ಆಗಮಿಸುವಾಗ ವಿಶಾಲವಾದ ಹೆದ್ದಾರಿ ಅದರೊಂದಿಗೆ ಸರ್ವಿಸ್ ರೋಡ್, ಕಾಮಗಾರಿ ನಡುವೆ ಬೀದಿ ವಿದ್ಯುತ್ ದೀಪಗಳ ಅಳವಡಿಕೆಯಿಂದ ನಾವೆಲ್ಲಿದ್ದೇವೆ? ಇದು ಹಂಗ್ಳೂರು ಹೌದೆ? ಎಂಬಂತಹ ಭಾವನೆ ಉದ್ಭವವಾಗುತ್ತದೆ. ಆದರೆ ಹಂಗ್ಳೂರು ದಾಟಿ ಕುಂದಾಪುರ ಪ್ರವೇಶಿದರೆ ಎಲ್ಲಾ ವಾತಾವರಣ ಬದಲು. ಹೆದ್ದಾರಿ ಸ್ಥಿತಿ ಹೊಂಡಗುಂಡಿಯಿಂದ ಕೂಡಿದ್ದರೆ, ಮಳೆಗಾಲದಲ್ಲಿ ನಿಂತ ನೀರಿನ ರಾಡಿ. ಬಸ್ರೂರು ವೃತ್ತ ಗೊಂದಲದ ಗೂಡು. ಅಲ್ಲಿಂದ ರಾಷ್ಟ್ರೀಯ ಹೆದ್ದಾರಿಯ ಕೆಟ್ಟ ಸ್ಥಿತಿ ಜನರಲ್ಲಿ ಆಕ್ರೋಶ ಉಂಟು ಮಾಡುವಂತಿದೆ. ಸರ್ವಿಸ್ ರೋಡ್ ಕಾಮಗಾರಿ ಆರಂಭದ ಹಂತದಲ್ಲೇ ಇದ್ದು ವ್ಯವಹಾರಸ್ಥರಿಗೆ, ಓಡಾಡುವ ಜನರಿಗೆ ಬಹಳ ಕಿರಿಕಿರಿ ಆಗುತ್ತಿದೆ. ಮುಖ್ಯ ಹೆದ್ದಾರಿಯೂ ಹಾಳಾಗಿದ್ದು ಅದನ್ನೂ ಅಭಿವೃದ್ಧಿ ಪಡಿಸಿಲ್ಲ. ಮಹಾತ್ಮಾಗಾಂದಿ ಪಾರ್ಕ್‌ನಿಂದ ಶಾಸ್ತ್ರಿ ಸರ್ಕಲ್‌ಗೆ ಹೋಗುವುದೇ ವಾಹನ ಚಾಲಕರಿಗೆ ಸಮಸ್ಯೆ.

ಶಾಸ್ತ್ರಿ ಸರ್ಕಲ್ ವೃತ್ತದಲ್ಲಿ ಕುಂದಪುರಕ್ಕೆ ಹೋಗುವವರು, ಹೆದ್ದಾರಿಯಲ್ಲಿ ಮುಂದೆ ಹೋಗುವವರು, ಹೋಟೆಲ್ ಶರೋನ್‌ಗೆ ಹೋಗುವವರು, ಆರ್.ಎನ್.ಶೆಟ್ಟಿ ಸಭಾಂಗಣಕ್ಕೆ , ಪ್ಲಸೆಂಟ್ ಶೋರೂಮ್‌ಗೆ. ಬಿವಿಎಸ್ ರಸ್ತೆಗೆ ಹೋಗುವ ವಾಹನ ಚಾಲಕರ ನಡುವೆ ಗೊಂದಲವಾಗುತ್ತಿದೆ. ಅದರಲ್ಲೂ ದೊಡ್ಡ ದೊಡ್ಡ ವ್ಯಾಗನ್‌ಗಳು, ಟ್ಯಾಂಕರುಗಳು, ಲಾರಿಗಳು ಸಾಲು ಸಾಲಾಗಿ ಬಂದರಂತೂ ದೊಡ್ಡ ಸಮಸ್ಯೆ.

ಶಾಸ್ತ್ರಿ ವೃತ್ತದ ಬಳಿ ಮೇಲ್ ಸೇತುವೆ ಕಾಮಗಾರಿ ಕುಂಟುತ್ತಾ ಆಮೆನಡಿಗೆಯಲ್ಲಿ 3 ವರ್ಷ ಕ್ರಮಿಸಿದೆ. ಆದರೂ 2016 ರಲ್ಲಿ ಪೂರ್ಣಗೊಳ್ಳುವ ಭರವಸೆ ಇಲ್ಲ. ಕಾಮಗಾರಿಗಾಗಿ ರಸ್ತೆ ಬದಿ ತಗಡಿನ ಗೋಡೆ ಮಾಡಿರುವುದರಿಂದ ಎಲ್ಲರಿಗೂ ಸಮಸ್ಯೆಯಾಗಿದೆ. ಪೋಸ್ಟರ್ ಹಚ್ಚುವವರಿಗೆ ಮಾತ್ರ ಅನುಕೂಲವಾಗಿದೆ.

# ವಿಶ್ವಯೋಗ ದಿನಾಚರಣೆಗೆ ಸಿದ್ಧತೆ




ಉಡುಪಿ ಜಿಲ್ಲೆಯಲ್ಲಿ ವಿಶ್ವಯೋಗ ದಿನಾಚರಣೆ ಅರ್ಥಪೂರ್ಣವಾಗಿ ಆಚರಿಸಲು ಸಕಲ ಸಿದ್ಧತೆಗಳು ನಡೆದಿದ್ದು ಯೋಗ ತರಬೇತಿ ನೀಡುವ ಸಂಘಟನೆಗಳಲ್ಲದೇ ಇತರ ಸೇವಾ ಸಂಸ್ಥೆಗಳು ಯೋಗದಿನಾಚರಣೆಯ ಯಶಸ್ಸಿಗೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಕೇಂದ್ರ ಸರಕಾರದ ಆಯುಷ್ ಇಲಾಖೆಯ ನಿರ್ದೇಶನದಂತೆ ಪ್ರತಿ ಜಿಲ್ಲೆಯಲ್ಲಿ ಮೇ 21 ರಿಂದಲೇ ಯೋಗ ಕಾರ್ಯಕ್ರಮಗಳು ಆರಂಭಗೊಂಡಿದ್ದು ಜೂನ್ 21 ರ ತನಕ ತರಬೇತಿಗಳು ನಡೆಯುತ್ತವೆ. ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿ ಈಗಾಗಲೇ ಯೋಗ ತರಬೇತಿ ನೀಡುತ್ತಿರುವ ಸಂಸ್ಥೆಗಳಲ್ಲದೇ ಸೇವಾ ಸಂಸ್ಥೆಗಳು ಯೋಗ ದಿನಾಚರಣೆಯನ್ನು ವಿಶೇಷವಾಗಿ ಆಚರಿಸಲು ಜೂನ್ 21 ರಂದು ಕಾರ್ಯಕ್ರಮ ಹಮ್ಮಿಕೊಂಡಿವೆ. ಕುಂದಾಪುರದ ಪತಂಜಲಿ ಯೋಗ ಕೇಂದ್ರ, ಯೋಗಬಂಧು ಕುಂದಾಪುರ, ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಮುಂತಾದ ಸಂಘಟನೆಗಳು ಸೇವಾಸಂಸ್ಥೆಗಳೊಂದಿಗೆ ಕಾರ್ಯಕ್ರಮ ಯೋಜಿಸಿವೆ. ಸಾರ್ವಜನಿಕರು ಯೋಗ ದಿನಾಚರಣೆಯ ಯಶಸ್ಸಿನಲ್ಲಿ ಪಾಲ್ಗೊಳ್ಳಬಹುದು ಎಂದು ಆಶಯ ವ್ಯಕ್ತಪಡಿಸಿವೆ.

Join the No. 1 Coaching class of Kundapura
and get unparallel results

FREE JEE/NEET BRIDGE COURSE
for 1st PU (Science) Students
From 15th June to 10th July (only 50 seats)
Eligibility: 10th Pass with Distinction

JEE/NEET FOUNDATION COURSE FOR 8TH STD
Starts on 18th june
For more details call us @ 9141138705/9916034605
or visit www.sginstitutes.com

SARASWATHI COACHING CENTER
(A Unit Of Saraswathi Group of Institutes)
1st Floor, Sri Ganesh Prasad, West Block Road, Near BEO office, Kundapura
Ph: 9141138705/9916034605/7022138450 email: sginstitutes@gmail.com
For online Registration and free videos visit www.sginstitutes.com
Saraswathi Group Of Institutes